ಒತ್ತಾಯವಿಲ್ಲ... ಏನೋ ನಿಮ್ಮ ಕಷ್ಟಕ್ಕಾದೀತು ಅಂತ ಹೇಳಿದೆ..." ಅನ್ನುತ್ತಾ ಅಲ್ಲಿಂದ ಹೊರಡುವವನಂತೆ ನಟಿಸಿದ್ದಾನೆ.

ಅಜ್ಜಿ ಆತುರಕ್ಕೆ ಬಿದ್ದಿದೆ. "ಏ ನಡಿಯಪ್ಪಾ... ಅವ್ರಿಗೆ ಗೊತ್ತಾಗಲ್ಲ... ಎಲ್ಲಿ ರಿಜಿಸ್ಟ್ರೇಷನ್ನು ಮಾಡಿಸ್ಬೇಕು ನಡಿ, ಕರ್ಕೊಂಡು ಹೋಗು... ಅನ್ನುತ್ತಾ ಹೊರಟಿದೆ. ಇವನು ಮೊಪೆಡ್ ಮೇಲೆ ಅಜ್ಜಿಯನ್ನ ಕೂರಿಸಿಕೊಂಡವನು ಅಲ್ಲಿಂದ ಹೊರಟಿದ್ದಾನೆ. ಕುಂತ ಮೇಲೆ ಅಜ್ಜಿ ಯಾವ ಕಡೆಗಪ್ಪಾ? ಅಂದದ್ದಕ್ಕೆ, ಹೊಸೂರು ರೋಡು ದೊಡ್ಡಾಸ್ಪತ್ರೆ ಪಕ್ಕದಲ್ಲೇ ಐತಲ್ಲಜ್ಜೀ... ಸಾಲು ಜನ ನಿಂತಿರ್ತಾರೆ ನೋಡು ಹೆಸ್ರು ಬರೆಸಾಕೆ, ಅಲ್ಲಿ... ಅಂದಿದ್ದಾನೆ.

ಅಜ್ಜ ನಿಧಾನಕ್ಕೆ ಅಂಗಡಿ ಬಾಗಿಲು ಹಾಕಿಕೊಂಡು ಮೆಲ್ಲಗೆ ಹಿಂದೆಯೇ ಹೊರಟಿದೆ. ಇವನು ಹೇಳಿದ ಜಾಗಕ್ಕೆ ಹೋಗಿ ನೋಡಿದರೆ ಏನಿದೆ? ಸಾಲೂ ಇಲ್ಲ, ಸೊಲ್ಲೂ ಇಲ್ಲ... ಅಜ್ಜಿ ತಲೆ ಮೇಲೆ ಮುಸುಗು ಹೊದ್ದು ಬೆಂಚೊಂದರ ಮೇಲೆ ಕುಳಿತುಕೊಂಡಿದೆ. ಏನೂಂತ ಕೇಳಿದ್ದಕ್ಕೆ...

"ಏನ್ ಹೇಳ್ಲಯ್ಯಾ... ಇದೇ ಆಫೀಸಂತ ಕರಕಂಡು ಬಂದ. ಅಜ್ಜೀ... ಇಲ್ಲಿನ ಆಫೀಸರು ತುಂಬಾ ಸ್ಟ್ರಿಕ್ಟು. ನಿನ್ನ ಮೈಮೇಲಿರೋ ಒಡವೆ ನೋಡಿದ್ರೆ ಏನೂ ಮಾತೇ ಆಡ್ಸಲ್ಲ. ಹೊರಗೆ ಕಳಿಸಿಬಿಡ್ತಾನೆ. ಒಂದ್ಕೆಲಸ ಮಾಡಾನ, ನಿನ್ನ ಒಡವೆ ಎಲ್ಲಾ ತೆಗೆದು ಈ ಕರ್ಚೀಫಿನಲ್ಲಿ ಗಂಟು ಹಾಕಿ ಕೊಟ್ಬಿರು... ಸೈನು ಹಾಕಿ ಹೊರಗೆ ಬಂದ ತಕ್ಷಣ ಮರೀದೆ ಇಸ್ಕಂಬುಡು ಅಂದ. ಮುದುಕುರ್ಗೆ ಸಹಾಯ ಮಾಡಕ್ಕೆ ಬಂದವನು, ಮೋಸ ಯಾಕೆ ಮಾಡ್ತಾನೆ ಅಂತ ನಂಬಿದೆ. ಕ್ಯೂ ಎಷ್ಟೈತೆ ಅಂತ ನೋಡಿಕೊಂಡು ಬತ್ತೀನಿ ಕುಂತಿರಜ್ಜಿ... ಅಂತ ಹೇಳಿ ಹೋದೋನು ಗಂಟೆಯಾದ್ರೂ ಬರ್ಲಿಲ್ಲ, ಎಲ್ಲಿ ಹೋದ ಮಾರಾಯಾ ಅಂತ ಅಲ್ಲಿ ಕಾಣ್ಸೋ ಕಚೇರಿ ಹತ್ರ ಹೋಗಿ ವಯಸ್ಸಾದವ್ರಿಗೆ ವೇತನ ಕೊಡ್ತಾರಂತಲ್ಲಪ್ಪಾ ಆ ಕಚೇರಿ ಎಲ್ಲಿ? ಅಂತ ಕೇಳಿದೆ. ಎಲ್ಲಾ ಮುಸಿಮುಸಿ ನಕ್ಕರು. ಇದು ಆಫೀಸಲ್ಲ, ಆಸುಪತ್ರೆ ಕಣಜ್ಜೀ... ವೇತನ ಕೊಡೋ ಜಾಗ ಅಲ್ಲ... ಅಂದ್ರು. ಮೋಸ ಆಗಿದ್ದು ಗೊತ್ತಾತು. ಏನಯ್ಯಾ ಈಗ ಮಾಡಾದು ಸುಮ್ನೆ ನಿನ್ನ ಮಾತು ಕೇಳ್ಕಂಡು ಬಿದ್ದಿರೋದು ಬಿಟ್ಟು, ಆಸೆ ಬಿದ್ದು ಸಾಯೋ ಕಾಲ್ದಲ್ಲಿ ದುಡುದುದ್ದೆಲ್ಲಾ ಕಳಕಂಡಂಗಾತು.. ಅಂತ ಗೋಳಾಡಿತು. ಅಲ್ಲೇ ಇದ್ದ ಕೆಲವರು ಕಥೇನೆಲ್ಲಾ ಕೇಳಿ ಮೊದ್ಲು ಪೊಲೀಸ್‌ಗೆ ಕಂಪ್ಲೇಂಟು ಕೊಡ್ರೀ ತಾತಾ... ಅಂದಿದ್ದಾರೆ. ಏನಾದರೇನು? ಕಳೆದುಕೊಂಡದ್ದು ಅಷ್ಟು ಸುಲಭಕ್ಕೆ ಸಿಗೋ ಹಾಗಿದ್ದರೆ ಬೇರೆಯದೇ ಮಾತು!

ಇದೇ ತರಹದಲ್ಲಿ ಸ್ವಲ್ಪ ಭಿನ್ನವಾದ ಕಲಾವಿದರಿರುತ್ತಾರೆ. ಅವರು ಪೂಜೆ ಮಾಡಿಸುವುದರಲ್ಲಿ ಎತ್ತಿದ ಕೈ. ಅದೇನು ಭಕ್ತಾದಿಗಳನ್ನು ಇವರೇ ಹುಡುಕುತ್ತಾರೋ, ಅಥವಾ ಭಕ್ತಾದಿಗಳೇ ಬಂದು ಇವರಿಗೆ ತಗುಲಿಕೊಳ್ಳುತ್ತಾರೋ... ಆ ಹಣದೊಡತಿ ಲಕ್ಷ್ಮಿದೇವಿಗೇ ಗೊತ್ತು. ಒಟ್ಟಿನಲ್ಲಿ ಆಕೆ ನಿಮ್ಮ ಮನೇಲೇ ಕಾಲು ಮುರ್ಕೊಂಡು ಬಿದ್ದಿರ್ಬೇಕು ಹಾಗೆ ಮಾಡ್ತೀವಿ ಅನ್ನುತ್ತಾರೆ. ಇಂಥಾ ದಿನ ಬರ್ತೀನಿ, ಪೂಜೆಗೆ ರೆಡಿ ಮಾಡ್ಕಂಡಿರಿ... ಅಂತ ಹೇಳಿದವನು ಆ ದಿನ ಮನೆಯವರೆಲ್ಲಾ ಇನ್ನೂ ಮಬ್ಬುಗಣ್ಣಿನಲ್ಲಿರುವಾಗಲೇ ಬಂದು ಪೂಜೆಗೆ ಅಣಿಯಾದಂತೆ ಮಾಡಿ ನಿಮ್ಮ ಮನೆಯೊಳಗಿನ ಒಡವೇನೆಲ್ಲಾ ದೇವರ ಮುಂದೆ ತಂದಿಡಿ ತಾಯೀ... ಪೂಜೆ ನಂತರ ಎತ್ಕೊಳ್ಳುವಿರಂತೆ ಅನ್ನುತ್ತಾನೆ. ಆ ಮನೆ ಮಹಾಲಕ್ಷ್ಮಿಗೆ ಸ್ವಲ್ಪನಾದ್ರೂ ಡೌಟು ಬರೋದು ಬೇಡವಾ? ಊಹೂಂ... ಇದ್ದಬದ್ದ ಒಡವೆಗಳನ್ನೆಲ್ಲಾ ರೇಷ್ಮೆ ಬಟ್ಟೆಯಲ್ಲಿ ಸುತ್ತಿ ತಂದು ದೇವರ ಮುಂದಿಟ್ಟು ಕೈ ಮುಗಿಯುತ್ತಾಳೆ. ಇರೋ ಚಿನ್ನಾನೆಲ್ಲಾ ದುಪ್ಪಟ್ ಆಗೋ ತರಾ ಪೂಜೆ ಮಾಡಿ ಸ್ವಾಮೀ, ಮುಂದಿನ ವರ್ಷ ಮಗಳ ಮದ್ವೆ ಐತೆ... ಅಂತ